(ಜಿ) ಕೊಳ್ಳೇಗಾಲ ತಾಲ್ಲೂಕಿನ ಮೇಕೆದಾಟು ಸ್ಥಳವನ್ನು ಪ್ರಯಾಣಿಕರ ತಂಗುದಾಣವನ್ನಾಗಿ ಮಾರ್ಪಡಿಸಿದಲ್ಲಿ ಕಾವೇರಿನದಿಗೆ ಸೇತುವೆಯನ್ನು ನಿರ್ಮಿಸುವುದು.

ಶ್ರೀ ಜಿ. ರಾಜೂಗೌಡ.—ಮಾನ್ಯ ಅಧ್ಯಕ್ಷರೆ, ಕೊಳ್ಳೇಗಾಲ ತಾಲ್ಲೂಕಿನ ಹನೂರು ಹೋಬಳಿಯ ವ್ಯಾಪ್ತಿಯೊಳಗೆ ಮೇಕೆದಾಟು ಎಂಬ ಪ್ರಸಿದ್ಧ ಯಾತ್ರಾಸ್ಥಳ ಇದೆ. ಕಾವೇರಿ ನದಿಯು ಇಲ್ಲಿ ಬಹಳ ಸಣ್ಣದಾಗಿ ಹರಿಯುತ್ತದೆ. ಇಲ್ಲಿ ಒಂದು ಮೇಕೆಯು ಕಾವೇರಿ ನದಿಯನ್ನು ಸುಲಭವಾಗಿ ದಾಟಿದ್ದುದರಿಂದ ಈ ಸ್ಥಳವು ಮೇಕೆದಾಟು ಎಂಬುದಾಗಿ ಪ್ರಸಿದ್ಧಿ ಹೊಂದಿದೆ. ಅನೇಕ ಯಾತ್ರಾರ್ಥಿಗಳು ಇಲ್ಲಿ ಬಂದು ಹೋಗುವುದರಿಂದ ರಸ್ತೆಯ ದುರಸ್ತಿ ಕೆಲಸವನ್ನು ಜಿಲ್ಲಾ ಪರಿಷತ್‌ಗೆ ವಹಿಸದೆ, ಸರ್ಕಾರವೇ ತೆಗೆದುಕೊಂಡು ಕೂಡಲೇ ದುರಸ್ತಿ ಮಾಡುವುದು, ಅಲ್ಲಿ ಪ್ರಮಾಣಿಕವಾಗಿ ತಂಗುದಾಣವನ್ನು ಏರ್ಪಡಿಸುವುದು. ಅತಿ ಮುಖ್ಯವಾಗಿ ಮೇಕೆದಾಟು ಬಳಿ ಒಂದು ಸೇತುವೆಯನ್ನು ಕಾವೇರಿ ನದಿಗೆ ಅಡ್ಡಲಾಗಿ ನಿರ್ಮಿಸಿದರೆ, ಹನೂರಿಗೂ ಬೆಂಗಳೂರಿಗೆ ಈಗಿರುವ ದೂರ ಸುಮಾರು ೪೦ ಕಿ.ಮೀ. ದೂರ ಕಡಿಮೆಯಾಗಿ, ಹನೂರು ಪಟ್ಟಣ ಸರ್ವವಿಧದಲ್ಲೂ ಅಭಿವೃದ್ಧಿ ಹೊಂದಲು ಅನುಕೂಲವಾಗುತ್ತದೆ. ಆದುದರಿಂದ ಇದನ್ನು ಮಾಡಿಸಬೇಕೆಂದು ಮಾನ್ಯ ಲೋಕೋಪಯೋಗಿ ಮಂತ್ರಿಗಳನ್ನು ಒತ್ತಾಯ ಪಡಿಸುತ್ತೇನೆ. ಈ ಬಗ್ಗೆ ಸದನದಲ್ಲಿ ಆಶ್ವಾಸನೆ ಕೊಡಬೇಕೆಂದು ಮಂತ್ರಿಗಳನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೆ, ಶ್ರೀ ಜಿ. ರಾಜುಗೌಡ ಅವರು ತಮ್ಮ ಸೂಚನೆಯನ್ನು ಅತಿಮುಖ್ಯವಾದ ಮೇಕೆದಾಟು ಬಳಿ ಒಂದು ಸೇತುವೆಯನ್ನು ಕಾವೇರಿ ನದಿಗೆ ಅಡ್ಡಲಾಗಿ ನಿರ್ಮಿಸಬೇಕೆಂದು ಕೋರಿದ್ದಾರೆ. ಈ ಸೇತುವೆ ನಿರ್ಮಾಣದ ಬಗ್ಗೆ ೧೯೮೧ರಲ್ಲಿ ಪರಿಶೀಲಿಸಲಾಗಿದ್ದು, ಆಗಿನ ಬೆಲೆಯಲ್ಲಿ ಸುಮಾರು ೭೫ ಲಕ್ಷ ರೂಪಾಯಿಗಳು ಬೇಕಾಗಬಹುದುಎಂದು ವರದಿಯಾಗಿತ್ತು. ಈ ಸ್ಥಳದಲ್ಲಿ ಕಾವೇರಿ ನದಿಗೆ ಸುಮಾರು ೩೦೦ ಮೀಟರ್ ಉದ್ದದ ಸೇತುವೆಯನ್ನು ಕಟ್ಟಬೇಕಾಗುತ್ತದೆ. ಇದಲ್ಲದೆ ಸೇತುವೆಗೆ ಉದ್ದೇಶಿಸಿರುವ ಸ್ಥಳದ ಕೆಳಭಾಗದಲ್ಲಿ ಜಲವಿದ್ಯುತ್ ಯೋಜನೆಗೆ ಡ್ಯಾಮ್ ನ್ನು ಕಟ್ಟುವ ಉದ್ದೇಶವು ಇರುವುದರಿಂದ ಈ ಸೇತುವೆಯನ್ನು ಉದ್ದೇಶಿಸಿರುವ ಜಲಾಶಯದ ನೀರಿನ ಮಟ್ಟಕ್ಕಿಂತ ಮೇಲ್ಮಟ್ಟಕ್ಕೆ ಕಟ್ಟಬೇಕಾಗುತ್ತದೆ. ಇದಕ್ಕೆ ಸುಮಾರು ಈಗಿನ ಬೆಲೆಗಳಲ್ಲಿ ೧½ ಕೋಟಿ ರೂಪಾಯಿಗಳಿಂದ ೨ ಕೋಟಿ ರೂಪಾಯಿಗಳವರೆಗೆ ಆಗಬಹುದು ಎಂದು ಅಂದಾಜು ಮಾಡಲಾಗಿದೆ. ಇಷ್ಟು ಸೆಚ್ಚಜವರಿ ಹೊತ್ತದ ಸೇತುವೆಯನ್ನು ಈಗ ಸಧ್ಯದ ಪರಿಸ್ಥಿತಿಯಲ್ಲಿ ತೆಗೆದುಕೊಳ್ಳುವುದು ಕಷ್ಟ ಸಾಧ್ಯ.

(ಜಿ) ಆರಕಲ ಗೂಡಿನಲ್ಲಿ ಪ್ರಥಮದರ್ಜೆ ಕಾಲೇಜು ಕಟ್ಟಡವನ್ನು ಪೂರ್ತಿ ಮಾಡಲು ಒತ್ತಾಯ.

ಶ್ರೀ ಕೆ. ಬಿ. ಮಲ್ಲಪ್ಪ.—ಆರಕಲಗೂಡು ತಾಲ್ಲೂಕು ಕೇಂದ್ರವಾದ ಆರಕಲಗೂಡಿನಲ್ಲಿ ಪ್ರಥಮ ದರ್ಜೆ ಕಾಲೇಜು ಮಂಜೂರಾಗಿ, ಕಾಲೇಜು ಮಕ್ಕಳಿಗೆ ಕಟ್ಟಡದ ಅವಶ್ಯಕತೆ ಮನಗಂಡು ಸರಕಾರ ಕಟ್ಟಡಕ್ಕೆ ಮಂಜೂರಾತಿ ಕೊಟ್ಟು ಮೇರೆಗೆ ಕಟ್ಟಡವನ್ನು ಪ್ರಾರಂಭ ಮಾಡಿದರು. ಈಗ ಶಾಲೆಗಳು ಒಂದೇ ಕಟ್ಟಡದಲ್ಲಿ ನಡೆಯುತ್ತಿದ್ದು, ಶಾಲಾ ಮಕ್ಕಳಿಗೆ ತೊಂದರೆ ಆಗಿರುತ್ತದೆ. ಹಾಲಿ ನಡೆಯುತ್ತಿರುವ ಕಟ್ಟಡ ಹಣದ ತೊಂದರೆಯಿಂದ ಅರ್ಧಕ್ಕೆ ನಿಂತಿರುತ್ತದೆ. ಮಕ್ಕಳಿಗೆ ತೊಂದರೆ ತಪ್ಪಿಸಲು ಕಟ್ಟಡವನ್ನು ಪೂರ್ತಿ ಮಾಡಲು ಮಾನ್ಯ ಮಂತ್ರಿಗಳಿಗೆ ಮನವಿ ಸಲ್ಲಿಸಿದರೂ ಪ್ರಯೋಜನ ವಾಗಿರುವುದಿಲ್ಲ. ಇದ್ದರಿಂದ ಕಟ್ಟಡವನ್ನು ಪೂರ್ತಿ ಮಾಡಲು ಬೇಕಾಗುವ ಹಣವನ್ನು ಒದಗಿಸುವಂತೆ ಮಾನ್ಯ ಮಂತ್ರಿಗಳು ಕೋರುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರಿಗೆ ನಾನು ಉತ್ತರವನ್ನು ತರಿಸಿಕೊಡುತ್ತೇನೆ.